**ಕರ್ನಾಟಕ ಸರ್ಕಾರ**
**ಕೃಷಿ ಇಲಾಖೆ**

ಸಂಖ್ಯೆ:ಕೃ.ಇ/ಆತ್ಮ/ಆಡಳಿತ/ಉ.ನ್ಯಾ/ಗುತ್ತಿಗೆ ಸೇವೆ/2021-22

ಕೃಷಿ ಆಯುಕ್ತರ ಕಾರ್ಯಾಲಯ
ನಂ.1, ಶೇಷಾದ್ರಿ ರಸ್ತೆ, ಬೆಂಗಳೂರು-1
**ದಿನಾಂಕ : 18.05.2021**

# ಸುತ್ತೋಲೆ

ವಿಷಯ:- 2021-22ನೇ ಸಾಲಿನಿಂದ ಆತ್ಮ ಸಿಬ್ಬಂದಿ ಸೇವೆಯನ್ನು ಇಲಾಖೆಯಿಂದ ನೇರ ಗುತ್ತಿಗೆ ಮೂಲಕ ಪಡೆಯುವ ಕುರಿತು.

ಉಲ್ಲೇಖ:- ಗೌರವಾನ್ವಿತ ಉಚ್ಛ ನ್ಯಾಯಾಲಯ, ಬೆಂಗಳೂರು, ಧಾರವಾಡ ಮತ್ತು ಕಲಬುರಗಿ ನೀಡಿರುವ WP No.11783/2017 - ದಿನಾಂಕ 11.12.2020, 105981/2016 - ದಿನಾಂಕ 23.02.2021 ಹಾಗೂ 28865/2016 - ದಿನಾಂಕ 26.02.2021ರ ಆದೇಶಗಳು.

***********

ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ ಗೌರವಾನ್ವಿತ ಉಚ್ಛ ನ್ಯಾಯಾಲಯಗಳಾದ ಬೆಂಗಳೂರು, ಧಾರವಾಡ ಮತ್ತು ಕಲಬುರಗಿ ಇವರಿಂದ ಇಲಾಖೆಯು ದಿನಾಂಕ.30.03.2016 ರಲ್ಲಿ ಆತ್ಮ ಕ್ಷೇತ್ರ ಸಿಬ್ಬಂದಿಗಳ ಹೊರ ಗುತ್ತಿಗೆ ಸೇವೆ ಪಡೆಯಲು ಹೊರಡಿಸಿದ್ದ ಸುತ್ತೋಲೆಗೆ ಸಂಬಂಧಪಟ್ಟಂತೆ, ನೀಡಲಾಗಿರುವ ಆದೇಶಗಳನ್ನು ಪರಿಗಣಿಸಿ, 2021-22ನೇ ಸಾಲಿನಿಂದ ಈ ಕೆಳಕಂಡಂತೆ ಜಿಲ್ಲೆಗಳು ಆತ್ಮ ಸಿಬ್ಬಂದಿ ಸೇವೆಯನ್ನು ಪಡೆಯುವಂತೆ ಸೂಚಿಸಿದೆ.

1. ಮೇಲ್ಕಂಡ ಉಲ್ಲೇಖಿತ ಆದೇಶಗಳಲ್ಲಿರುವಂತೆ (ರಾಜೀನಾಮೆ ಸಲ್ಲಿಸಿರುವ/ಗೈರು ಹಾಜರಾಗಿರುವವರನ್ನು ಹೊರತುಪಡಿಸಿ) ಆತ್ಮ ಸಿಬ್ಬಂದಿ ಮತ್ತು ಈಗಾಗಲೇ ಯೋಜನೆಯಲ್ಲಿ ಹೊರ ಗುತ್ತಿಗೆ ಸೇವಾ ಸಂಸ್ಥೆಗಳಿಂದ ಸೇವೆ ಸಲ್ಲಿಸುತ್ತಿರುವ ಆತ್ಮ ಸಿಬ್ಬಂದಿಯು ದಿನಾಂಕ.01.04.2021ರಿಂದಲೇ ಅನ್ವಯವಾಗುವಂತೆ ನೇರಗುತ್ತಿಗೆ ರೂಪದಲ್ಲಿ ಇಲಾಖೆಯ ಮೂಲಕವೇ ಸೇವೆಯಲ್ಲಿ ಮುಂದುವರಿಸುವುದು.

2. ಹೊರ ಗುತ್ತಿಗೆ ಸೇವಾ ಸಂಸ್ಥೆಯಲ್ಲಿ ಆತ್ಮ ಸಿಬ್ಬಂದಿಗೆ ನೀಡಲಾಗುತ್ತಿದ್ದ ಮಾಸಿಕ ಸಂಭಾವನೆಯನ್ವಯ 179 ಸೇವಾ ಅವಧಿಯಲ್ಲಿದ್ದವರನ್ನು ಕೂಡ ಆತ್ಮ ಸಿಬ್ಬಂದಿ ಹುದ್ದೆಯಾನುಸಾರ ಸಮಾನಾಂತರವಾಗಿ ಮಾಸಿಕ ಸಂಭಾವನೆಯನ್ನು (ಹಿಂದೆ ಪಡೆಯುತ್ತಿದ್ದ ಸಂಭಾವನೆಗೆ ಹೆಚ್ಚು ಅಥವಾ ಕಡಿಮೆಯಾಗದಂತೆ) ದಿನಾಂಕ.01.04.2021ರಿಂದ ಅನ್ವಯವಾಗುವಂತೆ ಆತ್ಮ ಮಾರ್ಗಸೂಚಿಯಲ್ಲಿರುವಂತೆ ಪಾವತಿಸಲು ಕ್ರಮವಹಿಸುವುದು.

3. ಇಲಾಖೆಯಿಂದ ಪಡೆಯುವ ನೇರ ಗುತ್ತಿಗೆ ಸೇವೆಯು ದಿನಾಂಕ.01.04.2021 ರಿಂದ 31.03.2022ರವರೆಗೆ ಇಲ್ಲವೇ ಕೇಂದ್ರ ಸರ್ಕಾರ ಅಥವಾ ರಾಜ್ಯ ಸರ್ಕಾರವು ಹೊರಡಿಸುವ ಆದೇಶಗಳು ಇಲ್ಲವೇ ಉಚ್ಛ ನ್ಯಾಯಾಲಯಗಳು ನೀಡುವ ಆದೇಶಗಳು ಇವುಗಳಲ್ಲಿ ಯಾವುದು ಮೊದಲೋ ಅದು ಅನ್ವಯವಾಗುವುದು.

4. 2021-22ರಲ್ಲಿ ಅನುಷ್ಠಾನವಾಗಿರುವ ಮತ್ತು ಅನುಷ್ಠಾನವಾಗಲಿರುವ ಇ-ಟೆಂಡರ್ ಪ್ರಕ್ರಿಯೆಗಳನ್ನು ಮೇಲೆ ಉಲ್ಲೇಖಿಸಿರುವ ಉಚ್ಛ ನ್ಯಾಯಾಲಯ ಆದೇಶಗಳ ಹಿನ್ನೆಲೆಯಲ್ಲಿ ಸ್ಥಗಿತಗೊಳಿಸುವುದು.

5. ಮೇಲೆ ಸೂಚಿಸಿರುವಂತೆ, ಸಿಬ್ಬಂದಿ ಗುತ್ತಿಗೆ ಅವಧಿಯು ದಿನಾಂಕ.31.03.2022ಕ್ಕೆ ಮುಕ್ತಾಯವಾಗುತ್ತಿದ್ದು, ಈ ಕುರಿತು ಕೇಂದ್ರ ಸರ್ಕಾರವು ನೀಡುವ ಯೋಜನಾ ಮುಂದುವರಿಕೆಯನ್ವಯ ಮುಂದಿನ ವರ್ಷಕ್ಕೆ ಸದರಿ ಸಿಬ್ಬಂದಿ ಸೇವೆಯನ್ನು ಪಡೆಯುವಾಗ ಕಳೆದ ವರ್ಷದಲ್ಲಿನ ಸಿಬ್ಬಂದಿ ಕಾರ್ಯಕ್ಷಮತೆಯನ್ನು ಜಿಲ್ಲಾ ಜಂಟಿ ಕೃಷಿ ನಿರ್ದೇಶಕರ ನೇತೃತ್ವದಲ್ಲಿನ ಕಾರ್ಯಕ್ಷಮತೆ ಪರಿಶೀಲನಾ ಸಮಿತಿಯ ಶಿಫಾರಸ್ಸಿನನ್ವಯ ಸೇವೆ ಪಡೆಯುವಲ್ಲಿ ಕ್ರಮ ಜರುಗಿಸುವುದು.

18/05/21.

....2.

6. 2020-21ನೇ ಸಾಲಿನಿಂದ ಹೊರ ಗುತ್ತಿಗೆ ಸೇವೆಯಲ್ಲಿ ಸೇವೆ ಸಲ್ಲಿಸುತ್ತಿದ್ದ ಆತ್ಮ ಸಿಬ್ಬಂದಿಯನ್ನು ನೇರ ಗುತ್ತಿಗೆ ರೂಪದಲ್ಲಿ ಇಲಾಖೆಯ ಮೂಲಕ ಸೇವೆ ಪಡೆಯುವಾಗ ಆಯಾ ಹುದ್ದೆಯಾನುಸಾರ ಸಿಬ್ಬಂದಿಯು ಆತ್ಮ ಮಾರ್ಗಸೂಚಿ 2018ರನ್ವಯ ವಿದ್ಯಾರ್ಹತೆ, ಅನುಭವ ಇತ್ಯಾದಿ ಅರ್ಹತೆಗಳನ್ನು ಹೊಂದಿರುವುದನ್ನು ದೃಡಪಡಿಸಿಕೊಂಡು ಸೇವೆ ಪಡೆಯುವುದು.

7. ನ್ಯಾಯಾಲಯಕ್ಕೆ ಹೋಗಿ ಆತ್ಮ ಮಾರ್ಗಸೂಚಿ 2018ರನ್ವಯ ವಿದ್ಯಾರ್ಹತೆ, ಅನುಭವ, ಇತ್ಯಾದಿಗೆ ಸಂಬಂಧಿಸಿದಂತೆ, ಉಲ್ಲೇಖಿತ ಉಚ್ಚ ನ್ಯಾಯಾಲಯಗಳು ನೀಡಿರುವ ಆದೇಶಗಳ ವಿರುದ್ಧ ಮೇಲ್ಮನವಿ ಅರ್ಜಿಗಳ ಮೂಲಕ ಬರಬಹುದಾದ ಗೌರವಾನ್ವಿತ ನ್ಯಾಯಾಲಯದ ಆದೇಶಕ್ಕೆ ಎಲ್ಲಾ ಆತ್ಮ ಸಿಬ್ಬಂದಿಯು ಒಳಪಡುವುದನ್ನು ಜಿಲ್ಲೆಗಳು ತಿಳಿಯಪಡಿಸುವುದು.

8. ಜಿಲ್ಲೆಗೆ ಮಂಜೂರಾಗಿರುವ ಆತ್ಮ ಸಿಬ್ಬಂದಿ ಸೇವೆ ಪಡೆಯುವಲ್ಲಿ ಖಾಲಿಯಿರುವ ಅಥವಾ ರಾಜೀನಾಮೆಯಿಂದ ತೆರವಾಗುವ ಸ್ಥಾನಗಳಿಗೆ (ನ್ಯಾಯಾಲಯದ ಮೊರೆ ಹೋಗಿ ರಾಜೀನಾಮೆ ನೀಡಿರುವ ಹಾಗೂ ಗೈರು ಹಾಜರಾಗಿರುವ ಸ್ಥಾನಗಳನ್ನು ಒಳಗೊಂಡಂತೆ) ಆತ್ಮ ಸಿಬ್ಬಂದಿ ಸೇವೆಯನ್ನು ಜಿಲ್ಲಾ ಚಾಲನಾ ಸಮಿತಿ ಅಧ್ಯಕ್ಷರು, ಜಿಲ್ಲಾ ಜಂಟಿ ಕೃಷಿ ನಿರ್ದೇಶಕರು, ಜಿಲ್ಲಾ ಕೃಷಿ ವಿಜ್ಞಾನ ಕೇಂದ್ರದ ಮುಖ್ಯಸ್ಥರು ಹಾಗೂ ಯೋಜನಾ ನಿರ್ದೇಶಕರು (ಆತ್ಮ)ರವರು ಸದಸ್ಯ ಕಾರ್ಯದರ್ಶಿಯಾಗಿರುವ ನೇಮಕಾತಿ ಸಮಿತಿ ಮೂಲಕ ಆತ್ಮ ಮಾರ್ಗಸೂಚಿ 2018ರನ್ವಯ ಆಯಾ ವರ್ಷಕ್ಕೆ ಅಂದರೆ ಉಳಿದಿರುವ ಸೇವಾ ಅವಧಿಗೆ ಸೀಮಿತವಾಗುವಂತೆ ನಿಯಮಾನುಸಾರ ಸೇವೆ ಪಡೆಯವುದು.

9. ನೇರ ಗುತ್ತಿಗೆ ಸೇವೆ ಪಡೆಯುವಾಗ ಎಲ್ಲಾ ಪ್ರಕಾರದ ಆತ್ಮ ಸಿಬ್ಬಂದಿಯಿಂದ ಪ್ರತಿ ಸಾರಿ ರೂ.100.00 ಛಾಪಾ ಕಾಗದ ಮೇಲೆ ಈ ಪತ್ರದೊಂದಿಗೆ ಲಗತ್ತಿಸಿರುವ ಅನುಬಂಧದ ಷರತ್ತುಗಳನ್ವಯ ಸಮಯಾನುಸಾರ ತಪ್ಪದೇ ಪಡೆದುಕೊಂಡು ಜಿಲ್ಲಾ ಜಂಟಿ ಕೃಷಿ ನಿರ್ದೇಶಕರುಗಳು ಕ್ರಮ ವಹಿಸುವುದು (ಒಡಂಬಡಿಕೆ ಪತ್ರದಲ್ಲಿ ಸಿಬ್ಬಂದಿಯಿಂದ ಸಹಿ ಪಡೆದುಕೊಳ್ಳತಕ್ಕದ್ದು).

ಮೇಲೆ ವಿವರಿಸಿರುವ ಈ ವಿಷಯಗಳು/ಸೂಚನೆಗಳು ತತ್‌ಕ್ಷಣದಿಂದಲೇ ಜಾರಿಯಾಗಲಿದ್ದು, ಸಂಬಂಧಪಟ್ಟ ಎಲ್ಲಾ ಅಧಿಕಾರಿಗಳು ತ್ವರಿತವಾಗಿ ಕ್ರಮವಹಿಸಲು ಸೂಚಿಸಿದೆ.

(ಒಡಂಬಡಿಕೆ ಅನುಬಂಧದಲ್ಲಿ ನೀಡಿದೆ)
(ಉಲ್ಲೇಖಿತ ಉಚ್ಚನ್ಯಾಯಾಲಯಗಳ ಆದೇಶಗಳ ಪ್ರತಿಯನ್ನು ಲಗತ್ತಿಸಿದೆ)

18/05/21.

**ಕೃಷಿ ಆಯುಕ್ತರು ಮತ್ತು**
**ರಾಜ್ಯ ನೋಡಲ್ ಅಧಿಕಾರಿ(ಆತ್ಮ),**
**ಕೃಷಿ ಇಲಾಖೆ, ಕರ್ನಾಟಕ ಸರ್ಕಾರ.**

<u>ಪ್ರತಿಯನ್ನು:</u>

1. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಕೃಷಿ ಇಲಾಖೆ, ಬೆಂಗಳೂರು, ರವರಿಗೆ ಮಾಹಿತಿಗಾಗಿ ಸಲ್ಲಿಸಿದೆ.
2. ಅಧ್ಯಕ್ಷರು, ಜಿಲ್ಲಾ ಆತ್ಮ ಚಾಲನಾ ಸಮಿತಿ ಹಾಗೂ ಮುಖ್ಯ ಕಾರ್ಯನಿರ್ವಹಣಾಧಿಕಾರಿ, ಜಿಲ್ಲಾ ಪಂಚಾಯತ್, (30 ಜಿಲ್ಲೆಗಳು) ಇವರುಗಳ ಅಗತ್ಯ ಕ್ರಮಕ್ಕಾಗಿ ಕಳುಹಿಸಿದೆ.
3. ಜಿಲ್ಲಾ ಜಂಟಿ ಕೃಷಿ ನಿರ್ದೇಶಕರು ಮತ್ತು ಯೋಜನಾ ನಿರ್ದೇಶಕರು (ಆತ್ಮ) ಹಾಗೂ ಉಪ ಕೃಷಿ ನಿರ್ದೇಶಕರು (1) & (2), ಕೃಷಿ ಇಲಾಖೆ, 29 ಜಿಲ್ಲೆಗಳು, ಇವರುಗಳ ಅಗತ್ಯ ಕ್ರಮಕ್ಕಾಗಿ ಕಳುಹಿಸಿದೆ.
4. ನಿರ್ದೇಶಕರು, ಸಮೇತಿ (ದ/ಉ), ವಿಸ್ತರಣಾ ನಿರ್ದೇಶಕರು, ಕೃ.ವಿ.ವಿ, ಬೆಂಗಳೂರು/ಧಾರವಾಡ ಇವರುಗಳಿಗೆ ಮೇಲಿನಂತೆ ಅಗತ್ಯ ಕ್ರಮಕ್ಕಾಗಿ ಕಳುಹಿಸಿದೆ.

# ಅನುಬಂಧ

**"ಗುತ್ತಿಗೆ ಆಧಾರಿತ ಸಿಬ್ಬಂದಿ ಸೇವೆ ಸಲ್ಲಿಸುವಲ್ಲಿ ಒಡಂಬಡಿಕೆ ಮಾಡಿಕೊಳ್ಳುವಲ್ಲಿನ ನಿಬಂಧನೆ ಹಾಗೂ ಷರತ್ತುಗಳು":**

ಶ್ರೀ--------------------ರವರ ಗುತ್ತಿಗೆ ಆಧಾರಿತ ಒಪ್ಪಂದದ ಸೇವೆಯ ಅವಧಿಯು ದಿನಾಂಕ: 01.04.2021 ರಿಂದ ಪ್ರಾರಂಭಗೊಂಡು ದಿ:31.03.2022 ಅಥವಾ ಮುಂದಿನ ಆದೇಶ ಹೊರಡಿಸುವವರೆಗೆ ಇವೆರಡರಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ ಮಾತ್ರ ಇದ್ದು ಇದೊಂದು ತಾತ್ಕಾಲಿಕ ನೇರಗುತ್ತಿಗೆ ಆಗಿರುತ್ತದೆ. ಈ ಸೇವಾ ಅವಧಿಯಲ್ಲಿ ಕೆಳಕಂಡ ಷರತ್ತು ಹಾಗೂ ನಿಬಂದನೆಗಳು ಅನ್ವಯವಾಗುತ್ತಿದ್ದು ಗುತ್ತಿಗೆ ಸಿಬ್ಬಂದಿಗೆ ಅನ್ವಯವಾಗುವುದು.

1. ಒಪ್ಪಂದದ ನೇಮಕಾತಿ ಸೇವೆಯಲ್ಲಿ ಕ್ರೋಢೀಕೃತ ಮಾಸಿಕ ಗೌರವಧನ ಆತ್ಮ ಮಾರ್ಗಸೂಚಿ 2018ರನ್ವಯ ರೂ.--------ಎಂದು ನಿಗದಿಪಡಿಸಲಾಗಿದೆ.(ಮೂಲ ವೇತನ+ಸ್ಥಳೀಯ ದೂರವಾಣಿ, ಪ್ರವಾಸ ವೆಚ್ಚಗಳು)

2. ಈ ಸೇವಾ ಅವಧಿಯಲ್ಲಿ ಕ್ರೋಢೀಕೃತ ಮಾಸಿಕ ಗೌರವಧನವನ್ನು ಹೊರತುಪಡಿಸಿ ಇನ್ನಿತರ ಯಾವುದೇ ಭತ್ಯೆಗಳಿಗೂ ಅರ್ಹರಾಗಿರುವುದಿಲ್ಲ.

3. ಸೇವಾ ಅವಧಿಯಲ್ಲಿ ಸಿಬ್ಬಂದಿಯ ಕಾರ್ಯಕ್ಷಮತೆಯು ಯಾವುದೇ ಕ್ಷಣದಲ್ಲಿ ತೃಪ್ತಿಕರವಾಗಿರದಿದ್ದರೆ ಅಥವಾ ಅನುಚಿತ ವರ್ತನೆಗಳು ಕಂಡುಬಂದಲ್ಲಿ, ತಕ್ಷಣವೇ ಸೇವೆಯಿಂದ ವಜಾಮಾಡುವ ಅಧಿಕಾರವನ್ನು ಜಿಲ್ಲಾ ಜಂಟಿ ಕೃಷಿ ನಿರ್ದೇಶಕರು/ಯೋಜನಾ ನಿರ್ದೇಶಕರು(ಆತ್ಮ)ರವರು ಹೊಂದಿರುವರು.

4. ಈ ಸೇವಾ ಅವಧಿಯು ಕೇಂದ್ರ ಸರ್ಕಾರದ ಸೂಚನೆಯನ್ವಯ ಪ್ರಸಕ್ತ ಸಾಲಿಗೆ ಅಂದರೆ ದಿ:31.03.2020ರವರೆಗೆ ಮಾತ್ರ ಅನ್ವಯವಾಗುತ್ತಿರುವುದರಿಂದ, ಮುಕ್ತಾಯವಾಗುವ ಆ ದಿನಾಂಕದಂದು ಅವರುಗಳ ನೇರಗುತ್ತಿಗೆ ಸೇವೆಯು ತಾನೇ ತಾನಾಗಿ ರದ್ದಾಗುವುದು.

5. ಇದರನ್ವಯ ಆಯಾ ಸಿಬ್ಬಂದಿ ಸೇವಾ ಅವಧಿಗೆ ಅನ್ವಯವಾಗುವಂತೆ ಯೋಜನಾ ನಿರ್ದೇಶಕರು(ಆತ್ಮ)/ಆಯಾ ಉಸ್ತುವಾರಿ ಅಧಿಕಾರಿಗಳು, ಜಿಲ್ಲಾ ಜಂಟಿ ಕೃಷಿ ನಿರ್ದೇಶಕರು ರವರ ನೇತೃತ್ವದಲ್ಲಿನ ಕಾರ್ಯಕ್ಷಮತೆ ಪರಿಶೀಲನಾ ಸಮಿತಿಯ ಮೂಲಕ 10 ದಿನಗಳೊಳಗಾಗಿ ಸಿಬ್ಬಂದಿ ನೇರಗುತ್ತಿಗೆ ಸೇವೆಯ ಕಾರ್ಯಕ್ಷಮತೆಯ ಕುರಿತು ಪ್ರಗತಿ ಪರಿಶೀಲನೆ ಕೈಗೊಂಡು ಸಲ್ಲಿಸುವ ವರದಿ ಆಧಾರದಮೇಲೆ ಕಾರ್ಯಕ್ಷಮತೆ ತೃಪ್ತಿಕರವಾಗಿರುವುದನ್ನು ದೃಢಪಡಿಸಿಕೊಂಡು ಯೋಜನಾ ಮುಂದುವರಿಕೆ ಅನ್ವಯ ಕ್ರಮವಹಿಸುವುದು.

6. ಕಳೆದ ಸಾಲಿನ ಗುತ್ತಿಗೆ ಅವಧಿಯಲ್ಲಿ ಕಾರ್ಯಪಾಲನಾ ವರದಿಯು ನೇರಗುತ್ತಿಗೆ ಸೇವೆಯು ತೃಪ್ತಿಕರವಾಗಿರುವುದನ್ನು ಜಂಟಿ ಕೃಷಿ ನಿರ್ದೇಶಕರವರ ಕಾರ್ಯಕ್ಷಮತೆ ಪರಿಶೀಲನಾ ವರದಿಯಾಧಾರಿಸಿ ಆಯಾ ಸಿಬ್ಬಂದಿಯ ಸೇವೆಯನ್ನು ನಿಯಮಾನುಸಾರ ಜಿಲ್ಲಾ ಆತ್ಮ ಸಂಸ್ಥೆಗಳು ಮುಂದಿನ ಸೇವಾ ಅವಧಿಗೆ ಮಾತ್ರ ಸೇವೆಯನ್ನು ಪಡೆಯಲು ಹೊಸದಾಗಿ ಆದೇಶ ನೀಡುವುದು.

7. ಈ ಕುರಿತು ಸಿಬ್ಬಂದಿಯ ಮುಂಜಾಗ್ರತೆಯಾಗಿ ನಿಯಮಾನುಸಾರ ಮುಂದುವರಿಸುವ ಸೇವೆಯ ಆದೇಶವನ್ನು ಪಡೆದುಕೊಂಡ ನಂತರವೇ ಹುದ್ದೆಗೆ ಹಾಜರಾಗುವುದು ಕಡ್ಡಾಯವಾಗಿದೆ.

8. ಗುತ್ತಿಗೆ ಆಧಾರಿತ ಸಿಬ್ಬಂದಿ ಪ್ರತಿ ತಿಂಗಳಿಗೆ ಒಂದು ದಿನವನ್ನು ಸಾಂದರ್ಭಿಕ ರಜೆಯನ್ನು ಹಾಗೂ ಗುತ್ತಿಗೆ ಸೇವಾ ನಿಯಮಗಳಿಗನುಸಾರ ಸದರಿ ಸಾಂದರ್ಭಿಕ ರಜೆಗಳನ್ನು ಆಯಾ ಸೇವಾ ಅವಧಿಯೊಳಗಾಗಿ ಒಂದು ಬಾರಿಗೆ ಗರಿಷ್ಠ ಆರು ದಿನಗಳು ಮೀರದಂತೆ ಕ್ರೋಢೀಕೃತವಾಗಿ ಪಡೆಯಬಹುದಾಗಿದೆ.

9. ಆತ್ಮ ಮಹಿಳಾ ಸಿಬ್ಬಂದಿಯು ಗರಿಷ್ಠ 90 ದಿನಗಳವರೆಗೆ ಮಾತ್ರ ವೇತನ ರಹಿತ ದಿನಗಳೆಂದು ಪರಿಗಣಿಸಿ ಪ್ರಸೂತಿ ರಜೆಯನ್ನು ನಿಯಮಾನುಸಾರ ಪಡೆಯಬಹುದಾಗಿದೆ.

10. ವೈದ್ಯಕೀಯ ಅಥವಾ ಇನ್ನಾವುದೇ ರೀತಿಯ ವಿಶೇಷವಾಗಿರುವ ಸಂದರ್ಭದಲ್ಲಿ ಸಿಬ್ಬಂದಿಗೆ ಗರಿಷ್ಠ 30 ದಿನಗಳವರೆಗೆ ವೇತನ ರಹಿತ ದಿನಗಳೆಂದು ಇಲಾಖೆಯಿಂದ ಕಡ್ಡಾಯವಾಗಿ ಪೂರ್ವಾನುಮತಿ ಪಡೆದ ನಂತರ ಸದುಪಯೋಗ ಪಡಿಸಿಕೊಳ್ಳಬಹ್ಮದಾಗಿರುತ್ತದೆ ಹಾಗೂ ಯೋಜನಾ ನಿರ್ದೇಶಕರು(ಆತ್ಮ) ರವರ ಪೂರ್ವಾನುಮತಿ ಕಡ್ಡಾಯವಾಗಿರುತ್ತದೆ.

(2......)

11. ಸಕ್ಷಮ ಒಪ್ಪಂದದ ಪ್ರಾಧಿಕಾರದ ಅನುಮತಿ ಪಡೆಯದೇ ಅಥವಾ ಇತರೇ ಬೇರೆ ಕಾರಣಗಳಿಂದಾಗಲಿ ಅನಧಿಕೃತವಾಗಿ ಗೈರುಹಾಜರಿಯಾಗುವುದು ಅಪರಾಧವಾಗುವುದು. ಆದ್ದರಿಂದ ವಿನಾಕಾರಣ ಗುತ್ತಿಗೆ ಆಧಾರದ ಅವಧಿಯಲ್ಲಿ ಒಂದು ತಿಂಗಳು ಮೀರಿ ಗೈರುಹಾಜರಾದಲ್ಲಿ ಆ ಕಾರಣದಿಂದ ನೇರಗುತ್ತಿಗೆ ನೇಮಕಾತಿ ರದ್ದತಿಯ ಕುರಿತು ಯೋಜನಾ ನಿರ್ದೇಶಕರು(ಆತ್ಮ)ರವರ ತೀರ್ಮಾನವೇ ಅಂತಿಮವಾಗಿರುತ್ತದೆ.

12. ಸಿಬ್ಬಂದಿಯು ಯೋಜನೆಯ/ಸಾರ್ವಜನಿಕ ಹಿತದೃಷ್ಟಿಯಿಂದ ಅಧಿಕೃತವಾಗಿ ತಮ್ಮ ಕಾರ್ಯವ್ಯಾಪ್ತಿಯಿಂದ ಹೊರಗಡೆ ಪ್ರಯಾಣ ಮಾಡಲೇಬೇಕಾದಲ್ಲಿ ಮೇಲಾಧಿಕಾರಿಗಳಿಂದ ಅನುಮತಿ ಪಡೆದು ಪ್ರವಾಸ ಮಾಡುವುದು. ಈ ಬಗ್ಗೆ ಆತ್ಮ ಪ್ರವಾಸ ಭತ್ಯೆ ನಿಯಮಗಳಡಿ ಲಭ್ಯವಿರುವ ಪ್ರಯಾಣಭತ್ಯೆ ಮತ್ತು ದಿನಭತ್ಯೆಯನ್ನು ಪಡೆಯಲು ನಿಯಮಾನುಸಾರ ಅರ್ಹರಾಗಿರುತ್ತಾರೆ.

13. ಒಪ್ಪಂದದ ಷರತ್ತು ಮತ್ತು ನಿಬಂಧನೆಗಳಲ್ಲಿ ನೀಡಿರುವ ಸೌಲಭ್ಯಗಳ ಹೊರತಾಗಿ ಮೇಲೆ ವಿವರಿಸಿರುವುದನ್ನು ಹೊರತುಪಡಿಸಿ ಬೇರಾವುದೇ ಸೌಲಭ್ಯಕ್ಕೆ ಅಂದರೆ ವೇತನ, ಬಡ್ತಿ, ಪದೋನ್ನತಿ, ಪಿಂಚಣಿ ಇತ್ಯಾದಿ ಸೌಲಭ್ಯಗಳಿಗೆ ಸದರಿ ಗುತ್ತಿಗೆ ನೌಕರರು ಅರ್ಹರಾಗಿರುವುದಿಲ್ಲ.

14. ಸದರಿ ನೌಕರರ ದುರ್ವರ್ತನೆ, ನಿರ್ಲಕ್ಷ್ಯತೆಯ ನಿಮಿತ್ತ ಸರ್ಕಾರಕ್ಕೆ ಸಂಭವಿಸಬಹುದಾದ ಎಲ್ಲಾ ನಷ್ಟಗಳನ್ನು ಸರ್ಕಾರಕ್ಕೆ ಸದರಿ ನೇರಗುತ್ತಿಗೆ ನೌಕರರು ಭರಿಸಿಕೊಡಲು ಬದ್ಧರಾಗಿರತಕ್ಕದ್ದು.

15. ಸದರಿ ಒಪ್ಪಂದದ ನೇರಗುತ್ತಿಗೆಯನ್ನು ಯಾವುದೇ ಕಾರಣಕ್ಕೂ ಖಾಯಂ ಹುದ್ದೆ ಎಂದು ಪರಿಗಣಿಸಲಾಗುವುದಿಲ್ಲ.

16. ಇವರು ತಮ್ಮ ಕರ್ತವ್ಯ, ಕಾರ್ಯವನ್ನು ಶ್ರದ್ಧೆ, ಭಕ್ತಿ ಮತ್ತು ಆಸಕ್ತಿಯಿಂದ ನಿರ್ವಹಿಸತಕ್ಕದ್ದು.

17. ಇವರು ತಮ್ಮ ಕರ್ತವ್ಯವನ್ನು ಪಾಲಿಸುತ್ತಿರುವಾಗ ಅಥವಾ ನೆರವೇರಿಸುತ್ತಿರುವಾಗ ಲಭ್ಯವಾಗಬಹುದಾದ ಅಥವಾ ದೊರಕಬಹುದಾದ ಅಧಿಕೃತ ಮಾಹಿತಿಯನ್ನು ಗೌಪ್ಯವಾಗಿಟ್ಟು ಕಟ್ಟುನಿಟ್ಟಾಗಿ ಪಾಲಿಸತಕ್ಕದ್ದು. ತಪ್ಪಿದ್ದಲ್ಲಿ, ಯಾವುದೇ ನೋಟೀಸ್ ಜಾರಿ ಮಾಡದೇ ಕೂಡಲೇ ಸೇವೆಯಿಂದ ತೆಗೆಯಲಾಗುವುದು.

18. ಇವರ ದುರ್ನಡತೆಯಿಂದಾಗಲೀ ಅಥವಾ ನಿರ್ಲಕ್ಷ್ಯತೆ, ಉದಾಸೀನತೆಯಿಂದಾಗಲಿ ಸರ್ಕಾರಕ್ಕೆ ಆದ ಆರ್ಥಿಕ ನಷ್ಟವನ್ನು ತುಂಬಿಕೊಡಲು ಹೊಣೆಯಾಗಿರುತ್ತಾರೆ.

19. ಕೇಂದ್ರ ಸರ್ಕಾರದ ಆತ್ಮ ಮಾರ್ಗಸೂಚಿ ಅನುಸಾರ ಸಮಯಾನುಸಾರದ ಸೂಚನೆಗಳನ್ನು ಅನುಷ್ಠಾನವಾಗುವಲ್ಲಿ ರಾಜ್ಯ ಸರ್ಕಾರ ಇಲ್ಲವೇ ಇಲಾಖೆಯು ತೆಗೆದುಕೊಳ್ಳುವ ನಿರ್ಧಾರಗಳಿಗೆ ಗುತ್ತಿಗೆ ಸಿಬ್ಬಂದಿಯು ಬದ್ಧರಾಗಿರುವುದು.

20. ಹುದ್ದೆಗೆ ನಿಗದಿಪಡಿಸಿದ ಕರ್ತವ್ಯಗಳನ್ನು ಹಾಗೂ ಮೇಲಾಧಿಕಾರಿಗಳು ಆಗಿಂದಾಗ್ಯೆ ಹೇಳುವ ಕರ್ತವ್ಯಗಳನ್ನು ಚಾಚೂ ತಪ್ಪದೆ ನಿರ್ವಹಿಸುವುದು.

21. ಜಿಲ್ಲಾ ಜಂಟಿ ಕೃಷಿ ನಿರ್ದೇಶಕರುಗಳು ಅವಶ್ಯವಿದ್ದಲ್ಲಿ ಅಥವಾ ಆ ಸಿಬ್ಬಂದಿ ಅವಶ್ಯಕತೆ ಬೇರೆ ತಾಲ್ಲೂಕಿನಲ್ಲಿ ಬೇಕಾದಲ್ಲಿ ಒಂದು ತಾಲ್ಲೂಕಿನಿಂದ ಇನ್ನೊಂದು ತಾಲ್ಲೂಕಿಗೆ ಜಿಲ್ಲಾ ಮಟ್ಟದ ಸಮಿತಿ ಅನುಮೋದನೆಯೊಂದಿಗೆ ತಾತ್ಕಾಲಿಕವಾಗಿ ನೇಮಿಸಿದಲ್ಲಿ ಕಾರ್ಯನಿರ್ವಹಿಸುವುದು.

22. ಈ ಒಪ್ಪಂದದ ಷರತ್ತುಗಳನ್ನು ಉಲ್ಲಂಘಿಸಿದಲ್ಲಿ ಯಾವುದೇ ಸಂದರ್ಭದಲ್ಲಿ ಇವರ ಸೇವೆಯ ನೇರಗುತ್ತಿಗೆ ಅವಧಿಯು ತಾನಾಗಿಯೇ ಮುಕ್ತಾಯವಾಗುತ್ತದೆ.

ಸಾಕ್ಷಿಗಳು:-

1.

2.

Approved as proposed

ಸಹಿ

18/05/21.

ಕೃಷಿ ಆಯುಕ್ತರು,
ಶೇಷಾದ್ರಿ ರಸ್ತೆ, ಬೆಂಗಳೂರು-560001